**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ743 /2024**

**ಸಿ.ಡಬ್ಲ್ಯೂಃ 7 , ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಕಿರಣ್ ಕುಮಾರ್

ತಂದೆಯ ಹೆಸರು : ಗಣಪತಿ ನಾಯ್ಕ

ವಯಸ್ಸು : 50 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ ವಸತಿ ಗೃಹ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 05/03/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು 2018 ರಿಂದ ಇವತ್ತಿನವರೆಗೆ ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ಪೊಲೀಸ್ ಮುಖ್ಯ ಆರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 16.12.2023 ರಂದು ನಾನು ಠಾಣೆಯಲ್ಲಿದ್ದಾಗ 10.30 ಗಂಟೆ ಸುಮಾರಿಗೆ ಚಾಸಾ -1 ರವರು ನನಗೆ ಹಾಗೂ ಚಾಸಾ -6, 8 ನ್ನು ಕರೆದು ಜೀಪಿನ ಮೇಲೆ ಶಹರ ಠಾಣೆಯ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯ ಮಾಡುತ್ತಾ ಜಾಲಿ ಕ್ರಾಸ್ ಹತ್ತಿರ ಬಂದಾಗ ಆರೋಪಿಯು ತನ್ನ ಮನೆಯ ಹಿಂಬದಿಯಲ್ಲಿ 3 ಆಕಳು, 1 ಹೋರಿಯನು ವಧೆ ಮಾಡಿ ಮಾಂಸ ಮಾರಾಟ ಮಾಡುವ ಉದ್ದೇಶದಿಂದ ಕಳುವು ಮಾಡಿರುವ ಬಗ್ಗೆ ಮಾಹಿತಿ ಬಂದಂತೆ ಸದರಿ ವಿಷಯ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನದಂತೆ 2 ಪಂಚರನ್ನು ಕರೆಯಿಸಿ ಅವರಿಗೆ ವಿಷಯ ತಿಳಿಸಿ ನಂತರ ಆಜಾದ ನಗರದ 1 ನೇ ಕ್ರಾಸ್ ನಲ್ಲಿ ಇರುವ ಆರೋಪಿಯ ಮನೆಗೆ ಹೋಗಿ ನೋಡೀದಾಗ ಮನೆಯ ಹಿಂಬದಿಗೆ 3 ಆಕಳು 1 ಹೋರಿ ಕಂಡುಬಂದಿದ್ದು ಈ ಬಗ್ಗೆ ದಾಖಲಾತಿಯನ್ನು ಚಾಸಾ 1 ರವರು ಆರೋಪಿಗೆ ಕೇಳಿದಾಗ ದಾಖಲಾತಿ ಇಲ್ಲವೆಂದು ತಿಳಿಸಿರುತ್ತಾನೆ. ಆತನು ಸದರಿ ಜಾನುವಾರನ್ನು ಕಳುವು ಮಾಡಿದ ಬಗ್ಗೆ ಖಾತ್ರಿ ಯಾದ ಕಾರಣ ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿ ಜಾನುವಾರುಗಳನ್ನು ವಶಕ್ಕೆ ಪಡೆದಿರುತ್ತಾರೆ. ಜಾನುವಾರುಗಳ ಕಿಮ್ಮತ್ತು ರೂ. 20,000 ಹಾಗೂ 4 ಹಗ್ಗ 10 ರೂ. ಅಗಿರಬಹುದು. ಸದರಿ ದಾಳಿ ಕಾಲಕ್ಕೆ ನಾನು ಜಪ್ತು ಪಡಿಸಿದ ಜಾನುವಾರು ಹಾಗೂ ಹಗ್ಗವನ್ನು ತರಲು ಸಹಾಯ ಮಾಡಿದ್ದು ಇರುತ್ತದೆ.

3. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿದ್ದು ಇರುತ್ತದೆ. ಸಾಕ್ಷಿಯು ಹಗ್ಗವನ್ನು ನೋಡಿ ಗುರುತಿಸಿದ್ದು ಇರುತ್ತದೆ ಅದನ್ನು ಮುದ್ದೆ ಮಾಲು –1 ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಘಟನೆಯ ಬಗ್ಗೆ ನನಗೆ ಮಾಹಿತಿ ಬಂದಾಗ ನಾನು ಚಾಸಾ –1 ರವರ ಜೊತೆಗೆ ಜಾಲಿ ಕ್ರಾಸ್ ಬಳಿ ಇದ್ದೇನು. ಜಾಲಿ ಕ್ರಾಸ್ ಗುನ್ನಾ ಸ್ಥಳದಿಂದ 2 ಕಿಮೀ ದೂದರಲ್ಲಿದೆ. ಗುನ್ನಾ ಸ್ಥಳಕ್ಕೆ ಪಂಚರನ್ನು ಜಾಲಿ ಕ್ರಾಸ್ ನಿಂದ ಕರೆದುಕೊಂಡು ಹೋಗಿದ್ದು ಇರುತ್ತದೆ. ಪಂಚರು ಯಾವ ವೃತ್ತಿ ಮಾಡುತ್ತಾರೆ ನನಗೆ ಗೊತ್ತಿಲ್ಲ ಮತ್ತು ಅವರನ್ನು ಚಾಸಾ 8 ರವರು ಕರೆಯಿಸಿದ್ದರು. ಚಾಸಾ 8 ಪಂಚರನ್ನು ಎಲ್ಲಿಂದ ಕರೆಯಿಸಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗುನ್ನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇದ್ದು ಅಲ್ಲಿಯ ಜನರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಗುನ್ನಾ ಸ್ಥಳದಲ್ಲಿ ಇರುವ ಮನೆಯಾರಿಗೆ ಸೇರಿದ್ದು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಜಾನುವಾರುಗಳನ್ನು ಇಟ್ಟಿರುವ ಸ್ಥಳದಲ್ಲಿ ಶೆಡ್ಡು ಇತ್ತು. ಜಾನುವಾರುಗಳನ್ನು ಸಾಕಲು ಇರುವ ಶೆಡ್ಡು ಇರಲಿಲ್ಲ. ಗುನ್ನಾ ಸ್ಥಳದಲ್ಲಿ ಪಂಚನಾಮೆ ಮಾಡುವಾಗ ನಾನು ಇದ್ದೇನು. ನಾನು ಪೊಟೋ ತೆಗೆದಿಲ್ಲ. ಪಂಚನಾಮೆ ಕಾಲಕ್ಕೆ ಪೊಟೋ ತೆಗೆಯುವಾಗ ನಾನು ಅಲ್ಲಿ ಇದ್ದೇನು. ನಿಪಿ– 1 ಪೊಟೋದಲ್ಲಿ ನಾನು ಹಾಗೂ ಆರೋಪಿತರು ಮತ್ತು ನಾನು ಹೇಳುವಂತಹ ಶೆಡ್ಡು ಇಲ್ಲ. ಜಪ್ತು ಪಡಿಸಿದ ಜಾನುವಾರುಗಳ ಪ್ರಾಯ ಹಾಗೂ ಲಿಂಗ ನನಗೆ ಗೊತ್ತಿಲ್ಲ. 4 ಹಗ್ಗಗಳನ್ನು ಗುನ್ನಾ ಸ್ಥಳದಲ್ಲಿ ಜಪ್ತು ಮಾಡಿದ್ದು ಇರುತ್ತೇವೆ. ಚಾಸಾ 1 ನನ್ನ ಮೇಲಾಧಿಕಾರಿ ಆಗಿದ್ದಾರೆ. ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ಗುನ್ನಾ ಸ್ಥಳದಿಂದ ಯಾವುದೇ ಜಾನುವಾರುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ಪಂಚನಾಮೆ ಮಾಡಿರುವ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಸುತ್ತ ಮುತ್ತ ಕಂಪೌಂಡ ಇದ್ದ ಬಗ್ಗೆ ನನಗೆ ನೆನಪಿಲ್ಲ. ಗೇಟಿನ ಮೇಲೆ ಮತ್ತು ಮನೆಯ ಮೇಲೆ ಹೆಸರು ಬರೆದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಗುನ್ನಾ ಸ್ಥಳದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ನಮ್ಮ ಮೇಲಾಧಿಕಾರಿಗಳು ದಾಖಲು ಮಾಡಿದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**